ಶ್ರೀ ಸಿದ್ದರಾಮಯ್ಯ : ಅದನ್ನು ಆಮೇಲೆ ಮಾಡಲಿ, ನಾನು ಶಿವಮೊಗ್ಗ ಮತ್ತು ಹಾಸನದಲ್ಲಿ ಗಲಾಟೆಯಾಗಿರುವ ಬಗ್ಗೆ ಸದನದಲ್ಲಿ ಪ್ರಸ್ತಾಪಿಸಿದಾಗ ಆ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು 'ಈಗ ಎಲ್ಲಾ ನಿಯಂತ್ರಣದಲ್ಲಿದೆ, ಏನೂ ತೊಂದರೆಯಿಲ್ಲ' ಎಂದು ಉತ್ತರ ನೀಡಿದ್ದರು. ಇತ್ತೀಚಿನ ವರದಿಗಳ ಪ್ರಕಾರ ಶಿವಮೊಗ್ಗದಲ್ಲಿ ಗೋಲಿಬಾರ್ ಆಗಿದೆ, ಇಬ್ಬರು ಸತ್ತಿದ್ದಾರೆ ಎಂಬ ಮಾಹಿತಿ ನನಗೆ ಬಂದಿದೆ. ಇದರ ಬಗ್ಗೆ ಸರ್ಕಾರ ಸದನಕ್ಕೆ ಮಾಹಿತಿ ಕೊಡಬೇಕು. ನಾನು ಈ ಬಗ್ಗೆ ಮತ್ತೋಮ್ಮೆ Parliamentary Affairs Minister ಗಮನ ಸೆಳೆಯುತ್ತೇನೆ. ಕನ್ನಡಪ್ರಭದಲ್ಲಿ ಪ್ರಕಟವಾದ ವರದಿಯೊಂದನ್ನು ಪ್ರತಿಭಟಿಸುವ ಸಂದರ್ಭದಲ್ಲಿ ಹಾಸನ ಮತ್ತು ಶಿವಮೊಗ್ಗದಲ್ಲಿ ಏನೊಂದು ಗಲಾಟೆಯಾಗಿದೆ, ಅದರ ಬಗ್ಗೆ ನಾನು ಸದನದಲ್ಲಿ ಪ್ರಸ್ತಾಪಿಸಿದಾಗ ಮಾನ್ಯ ಮುಖ್ಯಮಂತ್ರಿಗಳು ಉತ್ತರ ನೀಡಿ, 'ಪರಿಸ್ಥಿತಿ ಸಂಪೂರ್ಣ ನಿಯಂತ್ರಣದಲ್ಲಿದೆ, ಹಾಸನದಲ್ಲೂ ನಿಯಂತ್ರಣದಲ್ಲಿದೆ, ಶಿವಮೊಗ್ಗದಲ್ಲೂ ನಿಯಂತ್ರಣದಲ್ಲಿದೆ, ಏನೂ ತೊಂದರೆಯಿಲ್ಲ, ಎಲ್ಲರೂ ಅಲ್ಲೇ ಇದ್ದಾರೆ' ಎಂದು ಬಹಳ ಸ್ಪಷ್ಟವಾಗಿ ಹೇಳಿದ್ದರು. ಇತ್ತೀಚೆಗೆ ಬಂದಂತಹ ವರದಿ ಪ್ರಕಾರ ಅಲ್ಲಿ ಗೋಲಿಬಾರ್ ಆಗಿದೆ. ಈ ಬಗ್ಗೆ TV–9ನಲ್ಲೂ ಸುದಿ ಬರುತ್ತಿದೆ. ಇತರ ಬೇರೆ ಚಾನೆಲ್‌ಗಳಲ್ಲೂ ಸಹ ಈ ಬಗ್ಗೆ ವರದಿಯಾಗುತ್ತಿದೆ. ಇಬ್ಬರು ಸತ್ತಿದ್ದಾರೆ ಎಂಬ ವರದಿ ಬರುತ್ತಿದೆ. ಆದ್ದರಿಂದ, I want to know from the Government, what is the position ? ಇದು ನಿಜವೋ ? ಸುಳ್ಳೋ ? ಮಾನ್ಯ ಮುಖ್ಯಮಂತ್ರಿಗಳು ಹೇಳಿರುವುದು ಸರಿಯೋ ? ಅಥವಾ ಈಗ ನಮಗೆ ಬಂದಿರತಕ್ಕ ಮಾಹಿತಿ ಸರಿಯೋ ? ಎಂಬುದನ್ನು ಸರ್ಕಾರ clarify ಮಾಡಬೇಕು.

ಶ್ರೀ ಎಸ್. ಸುರೇಶ್‌ಕುಮಾರ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಪ್ರತಿಪಕ್ಷದ ನಾಯಕರೇನು ಪ್ರಸ್ತಾಪ ಮಾಡಿದ್ದಾರೆ, ಅದು ಸತ್ಯ, ಸನ್ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಟ್ಟಾಗ, ತಮಗೆ ಬಂದ ಮಾಹಿತಿಯನ್ನು ಸಭೆಯ ಮುಂದೆ ಇಟ್ಟಿದ್ದರು. ಅದಾದ ನಂತರ ಈಗ ಬಂದಿರುವ ಮಾಹಿತಿ ಏನೆಂದರೆ, ಅಲ್ಲಿ ನಡೆದ firing ನಲ್ಲಿ ಒಬ್ಬ ವ್ಯಕ್ತಿ ಮೃತಪಟ್ಟು, ಮೂರು

ಜನರಿಗೆ ಗಾಯವಾಗಿದೆ. ಅದು ಈಗ ಬಂದಿರುವ ಮಾಹಿತಿ. ಈಗ ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತಿದ್ದೇವೆ.

ಶ್ರೀ ಸಿದ್ದರಾಮಯ್ಯ : ಇದರ ಬಗ್ಗೆ ಸರ್ಕಾರ....

ಅಧ್ಯಕ್ಷರು : ಸರ್ಕಾರ ನಾಳೆ ಇದರ ಬಗ್ಗೆ detailed ಉತ್ತರ ಕೊಡಲಿ.

ಶ್ರೀ ಸಿದ್ದರಾಮಯ್ಯ : ಸರ್ಕಾರ ಇದರ ಬಗ್ಗೆ ನಾಳೆ ಸದನಕ್ಕೆ ವಿವರವಾದಂತಹ ಉತ್ತರ ಕೊಡಬೇಕು. ಏಕೆಂದರೆ, ಅರ್ಧಗಂಟೆ ಹಿಂದೆ ತಾನೇ, ಮಾನ್ಯ ಮುಖ್ಯಮಂತ್ರಿಗಳು ಎಲ್ಲವೂ ಶಾಂತವಾಗಿದೆ ಎಂದು ಹೇಳಿದ್ದರು. ಅವರಿಗೆ ಮಾಹಿತಿ ಕೊಡುವವರು ಯಾರು ? ಈ ತರಹದ ಮಾಹಿತಿಯನ್ನು ಅವರಿಗೆ ಯಾರು ಕೊಟ್ಟರು ? ಏಕೆ ಕೊಟ್ಟರು ?

ಅಧ್ಯಕ್ಷರು : ಸರ್ಕಾರದವರು ನಾಳೆ ಇದರ ಬಗ್ಗೆ detailed ಉತ್ತರ ಕೊಡಿ.

ಶ್ರೀ ಸಿದ್ದರಾಮಯ್ಯ : ಇದ್ದಕ್ಕಿದ್ದ ಹಾಗೆ ಎಲ್ಲಾ flare up ಆಗಿಬಿಟ್ಟಿತೆ?

ಅಧ್ಯಕ್ಷರು : ಇದರ ಬಗ್ಗೆ ನಾಳೆ ಸರ್ಕಾರದವರು detailed ಉತ್ತರ ಕೊಡುತ್ತಾರೆ.

ಶ್ರೀ ಸಿದ್ದರಾಮಯ್ಯ : ಎಲ್ಲಾ ಕಂಟ್ರೋಲ್‌ನಲ್ಲಿದೆ ಎಂದು ಉತ್ತರ ಕೊಟ್ಟಿದ್ದರು. ಮಾನ್ಯ ಮುಖ್ಯಮಂತ್ರಿಗಳ ಕೈಯ್ಯಲ್ಲಿ ಈ ತರಹದ ಉತ್ತರವನ್ನು ಅಧಿಕಾರಿಗಳು ಕೊಡಿಸುತ್ತಾರೆ. ಮಾನ್ಯ ಮುಖ್ಯಮಂತ್ರಿಗಳು ಸದನಕ್ಕೆ ಈ ತರಹದ ಉತ್ತರವನ್ನು ಕೊಡುತ್ತಾರೆ. ಅರ್ಧ ಗಂಟೆ ನಂತರ ಅಲ್ಲಿ ಗೋಲಿಬಾರ್ ಆಗಿದೆ, ಒಬ್ಬರು ಸತ್ತಿದ್ದಾರೆ ಎಂದು ನೀವು ಉತ್ತರ ಕೊಡುತ್ತೀರಿ. without the knowledge of the Government, ಅಲ್ಲಿ ಗೋಲಿಬಾರ್ ಹೇಗೆ ಆಗುತ್ತದೆ? ಇಲ್ಲಿ ಸದನ ನಡೆಯುತ್ತಿದೆ. ಸದನ ನಡೆಯುವಾಗ ....

ಶ್ರೀ ಎಸ್. ಸುರೇಶ್‌ಕುಮಾರ್ : With the knowledge of the Government ಯಾವ ಗೋಲಿಬಾರ್ ಸಹ ನಡೆಯುವುದಿಲ್ಲ. ಯಾವುದೇ ಸರ್ಕಾರಕ್ಕೆ ಅಂತಹ ಸ್ಥಿತಿ ಬರಬಾರದು.

ಶ್ರೀ ಸಿದ್ದರಾಮಯ್ಯ : With the knowledge of the Government ಅಂದರೆ, in the sense, ಆ ಬಗ್ಗೆ ನಿಮ್ಮ ಮೇಲಧಿಕಾರಿಗಳಿಗೆ ಗೊತ್ತಿರುತ್ತದೆ. ಇದು ಮೇಲಧಿಕಾರಿಗಳಿಗೆ ಗೊತ್ತಾಗಿರುವುದಿಲ್ಲವೇ ? ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರ ಕೊಡಿಸಿದರಲ್ಲಾ, ಅಲ್ಲಿ ಪರಿಸ್ಥಿತಿ ಏನಿದೆ ಎಂಬುದನ್ನು ಅವರ ತಿಳಿದುಕೊಂಡು ಹೇಳಬೇಕಲ್ಲವೇ? Why it has happened? Whatever information the Government has got ಅದು ಸರಿಯಿಲ್ಲ.

ಶ್ರೀ ಬಸವರಾಜ ಬೊಮ್ಮಾಯಿ : ಸನ್ಮಾನ್ಯ ವಿರೋಧ ಪಕ್ಷದ ನಾಯಕರೆ, ತಾವೂ ಇಲ್ಲೇ ಇದ್ದೀರಿ, ನಾವೆಲ್ಲರೂ ಇಲ್ಲೇ ಇದ್ದೇವೆ. ಈ ಸದನದಲ್ಲೇ ನಾವೆಲ್ಲಾ ಕುಳಿತಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳಿಗೆ ಏನೊಂದು ಮಾಹಿತಿ ಇತ್ತೋ, ಅದನ್ನು ಅವರು ಸದನಕ್ಕೆ ಒದಗಿಸಿದ್ದಾರೆ. Live TV ಇರುವುದರಿಂದ ಅಲ್ಲಿ ಏನು ನಡೆಯುತ್ತಿದೆ ಎಂಬುದನ್ನು ತಿಳಿದುಕೊಂಡು ತಾವು ಆ ಬಗ್ಗೆ ಸದನದಲ್ಲಿ ಬೆಳಿಗೆ ತಂದಿರಿ. ಆ ಬಗ್ಗೆ ಅಧಿಕಾರಿಗಳಿಂದ ಮಾಹಿತಿ ಪಡೆದುಕೊಂಡು, ಇರತಕ್ಕಂಥ ಪರಿಸ್ಥಿತಿಯ ಬಗ್ಗೆ ಮಾನ್ಯ ಸಂಸದೀಯ ಸಚಿವರು ಈಗಾಗಲೇ ಉತ್ತರ ಕೊಟ್ಟಿದ್ದಾರೆ. ಈ ಬಗ್ಗೆ ವಿವರವಾದಂತಹ ಮಾಹಿತಿಯನ್ನು ನಾಳೆ ಸದನಕ್ಕೆ ಕೊಡುತ್ತೇವೆ.

ಅಧ್ಯಕ್ಷರು : ಆಯಿತು, ನಾಳೆ ವಿವರವಾದ ಮಾಹಿತಿ ಸದನಕ್ಕೆ ಕೊಡಿ.

ಈಗ ಸದನವನ್ನು ನಾಳೆ ಬೆಳಿಗ್ಗೆ 10.30 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವನ್ನು ಸಂಜೆ 6.17 ಗಂಟೆಗೆ ಮುಂದೂಡಲಾಯಿತು. ಸದನವು ಪುನಃ ದಿನಾಂಕಃ 2ನೇ ಮಾರ್ಚ್ 2010ರ ಮಂಗಳವಾರದಂದು ಬೆಳಿಗ್ಗೆ 10.30 ಗಂಟೆಗೆ ಸೇರುವುದು)